ಆದಷ್ಟು ನೇರವಾಗಿ ಕೂತು ಆತನ ಮುಖವನ್ನು ನೋಡುತ್ತಿದ್ದೆ. ನನ್ನ ಫೋನು ಗಿರ್ರೆಂದಿತು. ಥತ್ತೇರಿ, ಸೈಲೆನ್ಸ್ ಮೋಡಿನಲ್ಲಿಡಬೇಕಿತ್ತು ಎಂದುಕೊಂಡೆ. ಆದರೆ ಅದು ಗಿರ್ರೆನ್ನುವುದು ನಿಲ್ಲದೇ ಇದ್ದಾಗ ಜೇಬಿನಿಂದ ತೆಗೆದು ಸೈಲೆನ್ಸಿಗೆ ಹಾಕಲು ಪ್ರಯತ್ನಿಸಿದೆ. ನನಗೆ ಮೇಸೇಜು ಮಾಡಿದ್ದು ಶೆರಿಲ್ – 'ಆತನ ಬೂಬುಗಳನ್ನು ಗಮನಿಸಿದೆಯಾ?' ಎಂದಿತ್ತು. ನಾನು ಪಕ್ಕ ತಿರುಗಿ ಕಣ್ಣಗಲಿಸಿ ಆಕೆಯನ್ನು ಶ್ ಎಂದರೂ ನನ್ನ ಕಣ್ಣುಗಳು ಆತ ಹಾಕಿದ್ದ ಬ್ಲೌಸಿನ ಎದೆಭಾಗವನ್ನು ಗಮನಿಸಿದವು. ಅಲ್ಲಿ ಕೊಂಚ ಉಬ್ಬಿತ್ತು. ನನ್ನ ಗಮನ ಅತ್ತ ಹೋಗಿದ್ದನ್ನು ನೋಡಿದ ಶೆರಿಲ್, 'ಹಾರ್ಮೋನೋ, ಪುಶಪ್ ಫಾಲ್ಸಿಗಳೋ?' ಎಂದು ಮೆಸೇಜಿಸಿದಳು. ನಾನು ಇವಳ ಕಾಟ ತಾಳಲಾಗದೇ ಫೋನನ್ನು ಆಫ್ ಮಾಡಿ ಇಟ್ಟುಕೊಂಡೆ.

ಅವತ್ತಿನ ಮೀಟಿಂಗ್ ಮುಗಿದಮೇಲೆ ವಾಪಸ್ ಕಾರಲ್ಲಿ ಬರುವಾಗ ಶೆರಿಲ್ ಕೂಡ ನನ್ನ ಕಾರಲ್ಲಿಯೇ ಬಂದಳು. ಕಾರಿನಲ್ಲಿ ಕೂತು ಮಾರಿಸ್‌ನ ಫೇಸ್‌ಬುಕ್ ಪೇಜು ತೆಗೆದು ಆತನ ವಿವರಗಳನ್ನು ಜಾಲಾಡುತ್ತಿದ್ದಳು. ಆಕೆಯ ಪ್ರಕಾರ ಇಂತದೊಂದು ಗಾಸಿಪ್ಪು ಎಷ್ಟೋ ದಿನದಿಂದ ಇತ್ತು. ಆದರೆ ಅವನ ಫೇಸ್‌ಬುಕ್ ಪೋಸ್ಟ್‌ಗಳ ಪ್ರಕಾರ ಆತ ಹೀಗೆ ಸಾರ್ವಜನಿಕವಾಗಿ ಹೆಂಗಸಿನ ವೇಷ ಹಾಕಿಕೊಂಡು ಹೊರಗೆ ಕಾಣಿಸಿಕೊಳ್ಳುತ್ತಿರುವುದು ಕಳೆದ ತಿಂಗಳಿಂದ. ಇಂದು ಆಸ್ಪತ್ರೆಯಲ್ಲಿ ಮೊದಲಬಾರಿಗೆ ಮೀಟಿಂಗಿಗೆ ಹೆಂಗಸಿನ ವೇಷ ಹಾಕಿಕೊಂಡು ಬಂದಿದ್ದಾನೆ. ಆಕೆ ಮಾರಿಸ್ ಕೆಲಸ ಮಾಡುವ ಆಸ್ಪತ್ರೆಯ ನರ್ಸಿಂಗ್ ಮ್ಯಾನೇಜರು ಜೆಸ್ಸಿಗೆ ಮೆಸೇಜ್ ಮಾಡಿ, 'ಮಾರಿಸ್‌ನ ವಿಷಯ ಏನು?' ಎಂದು ಕೇಳಿದಳು. ಆಕೆ, 'ನಿನಗೆ ಒಂದು ನಿಮಿಷ ಫೋನು ಮಾಡಲಾ?' ಎಂದು ಮರುಮೆಸೇಜಿಸಿ, ಇವಳ ಮೆಸೇಜಿಗೂ ಕಾಯದೇ ಫೋನು ಮಾಡಿಯೇ ಬಿಟ್ಟಳು. 'ಶೆರಿಲ್, ನಾನು ನಿನಗೆ ಎಷ್ಟೋ ದಿನದಿಂದ ಹೇಳಬೇಕು ಎಂದುಕೊಂಡಿದ್ದೆ' ಎನ್ನುತ್ತಿದ್ದಾಗ ಶೆರಿಲ್ ಸ್ಪೀಕರ್ ಆನ್ ಮಾಡಿದಳು. ಆಕೆ ಶೆರಿಲ್‌ಗಿಂತ ಹೆಚ್ಚು ಉತ್ಸಾಹದಿಂದ ಮಾತಾಡುತ್ತಿದ್ದಳು. 'ಆತನಿಗೆ ಐವತ್ತಾರು ವರುಷ. ಪ್ರಾಸ್ಟೇಟು ದೊಡ್ಡದಾಗೋ ವಯಸ್ಸು. ಈಗ ಆತನಿಗೆ ಬದಲಾವಣೆ ಸಾಧ್ಯವಾ? ನನಗೆ ಗೊತ್ತಿದ್ದ ಪ್ರಕಾರ ಕಾಲ್‌ರೂಮಿನಲ್ಲಿ ಒಬ್ಬನೇ ಇದ್ದಾಗ ಆತ ಕದ್ದು ಹೆಂಗಸರ ಬಟ್ಟೆಗಳನ್ನು ಹಾಕಿಕೊಂಡು ಮೇಕಪ್ ಮಾಡಿಕೊಂಡಿರುತ್ತಿದ್ದ. ನಾವು ಕರೆದ ತಕ್ಷಣ ಕೆಲವೊಮ್ಮೆ ಅವಸರಕ್ಕೆ ಹಾಗೇ ಮುಖ ಉಜ್ಜಿಕೊಂಡು ಬರುತ್ತಿದ್ದಾಗ ನಾವು ಆತನ ಹೆಂಡತಿಯ ಜತೆ ಇದ್ದಾನೆ ಎಂದುಕೊಳ್ಳುತ್ತಿದ್ದೆವು. ತಮಾಷೆ ಎಂದರೆ ಆತನ ಹೆಂಡತಿಯೇ ಇವನನ್ನು ಉತ್ತೇಜಿಸಿದಳಂತೆ. ಕೆಲವೊಮ್ಮೆ ಆಕೆಯೇ ಅವನಿಗೆ ಮೇಕಪ್‌ಗೆ ಸಹಾಯ ಕೂಡ ಮಾಡುತ್ತಿದ್ದಳಂತೆ. ಆಕೇನ ನೋಡಿದ್ದೀಯಾ? ಆಕೆಯೂ ಇವನ ಹೈಟೇ. ತೊಂದರೆ ಇಲ್ಲ ಬಿಡು. ಕ್ಲಾಸೆಟ್ ತುಂಬಾ ಆಕೇದೇ ಬಟ್ಟೆಯಿದೆ. ಹಂಚ್ಕೋಬಹುದು' ಎಂದಳು.

ಶೆರಿಲ್, 'ಮೈ ಗಾಡ್, ಜೆಸ್ಸಿ. ಹೈಸ್ಕೂಲು ಓದೋ ಅವಳಿ ಹುಡುಗಿಯರಿದ್ದಾರಲ್ವ, ಆತನಿಗೆ?' ಕೇಳಿದಳು.

'ಹೌದು, ಹೌದು. ಅವರೂ ಅಪ್ಪನ ಈ ನಿರ್ಣಯವನ್ನು ಬಹಳ ಬೆಂಬಲಿಸುತ್ತಾರಂತೆ.'

'ಮತ್ತೆ, ಕೆಲಸ.'

'ದೇವರಿಗೇ ಗೊತ್ತು. ಈಗಿನ ಆಡಳಿತ ಮಂಡಳಿಯವರ ಬೆಂಬಲ ಇದೆ ಎಂದು ಕೇಳಿದೆ. ನಂತರ ಏನಾಗುತ್ತೋ ಗೊತ್ತಿಲ್ಲ. ಆದರೆ ಆತ ಎಮರ್ಜನ್ಸಿ ವೈದ್ಯ. ನನ್ನ ಹೆಸರು ಡಾ. ಮಾರಿಸ್ ವಿಲಿಯಮ್ ಎಂದು ಹೇಳಿಕೊಂಡು ಪಕ್ಕಾ ಎಲಿಜಬೆತ್ ಟೇಲರ್ ತರ ಡ್ರೆಸ್ ಮಾಡಿಕೊಂಡು ಈತ ಹೋಗಿ ನಿಂತರೆ ಪಾಪ ಹಾರ್ಟ್ ಅಟ್ಯಾಕಾದವನಿಗೆ ರಿದಮ್ ತಪ್ಪಿ ಹೋಗತ್ತಪ್ಪ.